ಇ) ಅನ್ವಯಿಸುವುದಿಲ್ಲ.

ಈ) ಸರ್ಕಾರದ ತೀರ್ಮಾನದ ಪ್ರಕಾರ ಆ ಘಟಕಗಳನ್ನು ಸ್ಥಾಪಿಸಲಾಗಿದೆ. ಆದ್ದರಿಂದ ಆ ಕುರಿತಂತೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆದೂರಿನಲ್ಲಿರುವ ವಿದ್ಯಾರ್ಥಿನಿಲಯಕ್ಕೆ ಅನುದಾನ ನೀಡುವುದು

3649(4158) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಸ್ಫೂರ್ತಿ (ರಿ), ಕೋಟೇಶ್ವರ ಇದರ ವತಿಯಿಂದ ನಡೆಯುತ್ತಿರುವ ಕೆದೂರಿನಲ್ಲಿರುವ ವಿದ್ಯಾರ್ಥಿನಿಲಯವನ್ನು ಯಾವ ಸಾಲಿನಿಂದ ಸರ್ಕಾರ ಅನುದಾನಿತ ವಿದ್ಯಾರ್ಥಿ ನಿಲಯವೆಂದು ಮಂಜೂರಾತಿ ನೀಡಿದೆ;

ಆ) ಸದರಿ ಸಂಸ್ಥೆಯನ್ನು ಅನುದಾನಿತ ವಿದ್ಯಾರ್ಥಿ ನಿಲಯವೆಂದು ಪರಿಗಣಿಸಿದ ವರ್ಷದಿಂದ ನೀಡಲಾದ ಅನುದಾನವೆಷ್ಟು; (ವರ್ಷವಾರು ವಿವರ ನೀಡುವುದು);

ಇ) ಸದರಿ ವಿದ್ಯಾರ್ಥಿನಿಲಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಒಬ್ಬ ವಿದ್ಯಾರ್ಥಿಗೆ ವರ್ಷ ಒಂದಕ್ಕೆ ಎಷ್ಟು ಅನುದಾನ ನೀಡಲಾಗುತ್ತದೆ;

ಈ) ಬಂದಲ್ಲಿ ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡ ಕ್ರಮವೇನು;

ಉ) ಸದರಿ ವಿದ್ಯಾರ್ಥಿನಿಲಯವನ್ನು ಷರತ್ತು ರಹಿತವಾಗಿ ಸರ್ಕಾರ ವಹಿಸಿಕೊಳ್ಳುವುದೇ?

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕುಂದಾಪುರ ತಾಲ್ಲೂಕು ಸ್ಫೂರ್ತಿ (ರಿ), ಕೋಟೇಶ್ವರ ಇದರ ವತಿಯಿಂದ ಕೆದೂರಿನಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 189 ಪಕವಿ 2000 ದಿನಾಂಕ :19–3–2002 ರನ್ವಯ ಅನುದಾನಿತ ವಿದ್ಯಾರ್ಥಿನಿಲಯಗಳೆಂದು ಅನ್ವಯಿಸಿ ಮಂಜೂರಾತಿ ನೀಡಿದೆ.

ಆ) ಸದರಿ ಸಂಸ್ಥೆಯನ್ನು ಅನುದಾನಿತ ವಿದ್ಯಾರ್ಥಿನಿಲಯವೆಂದು ಪರಿಗಣಿಸಿದ ವರ್ಷದಿಂದ ನೀಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.

1)	2001–02	ರೂ. 2.72 ಲಕ್ಷಗಳು
2)	2002–03	ರೂ. 2.42 ಲಕ್ಷಗಳು

ಇ) ಬಾಲಕರು 45 ಬಾಲಕಿಯರು 35 ಒಟ್ಟು 80 ವಿದ್ಯಾರ್ಥಿಗಳು, ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ರೂ. 350.00 ರಂತೆ ಭೋಜನಾ ವೆಚ್ಚವಾಗಿ ಅನುದಾನವನ್ನು ಸದರಿ ವಿದ್ಯಾರ್ಥಿಯ ನಿಲಯದಲ್ಲಿ ಹಾಜರಾತಿ ಹಾಗೂ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿದ ಅವಧಿಗೆ ಅನುಗುಣವಾಗಿ ನೀಡಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ. ಅನುದಾನ ಬಿಡುಗಡೆ ಮಾಡುವುದು ಬಾಕಿ ಇರುವುದಿಲ್ಲ.

ಉ) ಇಲ್ಲ.

ಉಡುಪಿ ಜಿಲ್ಲೆಯಲ್ಲಿ ಮತ್ಸ್ಯ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳಿಗೆ ಅನುದಾನ ಬಿಡುಗಡೆ ಮಾಡದೇ ಇರುವುದು

3650(4159) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತ್ಸ್ಯಆಶ್ರಯ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ (ವರ್ಷವಾರು ಜಿಲ್ಲಾವಾರು ವಿವರ ನೀಡುವುದು);